# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

## ಎಸ್‌ಸಿ ನಂ. 05/2021

ಸಿಡಬ್ಲ್ಯುಃ 17 / ಪಿಡಬ್ಲ್ಯುಃ 9

ದಿನಾಂಕಃ 17.07.2026

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಕಾಂತ ರೋಣದ |
| ತಂದೆ ಹೆಸರು | : | ಫಕೀರಪ್ಪ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ನರಗುಂದ |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

1. ಪ್ರಾಸಾ-1 ರವರ ಪರಿಚಯ ಇರುತ್ತದೆ. ಆರೋಪಿ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು. ನಮ್ಮ ಮನೆಯು ನರಗುಂದದದ ಹೊರಕೇರಿ ಓಣಿಯಲ್ಲಿ ಇರುತ್ತದೆ.

2. ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ಪೋಲೀಸರು ನಾವು ಬಾಡಿಗೆಗೆ ಕೊಟ್ಟಿದ್ದ ಮನೆಗೆ ಬಂದಿದ್ದರು. ಯಾವ ಕಾರಣಕ್ಕೆ ಪೋಲೀಸರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ಆರೋಪಿಯು 5 – 6 ತಿಂಗಳು ನಮ್ಮ ಮನೆಯಲ್ಲಿ ತಿಂಗಳಿಗೆ ರೂ.900/- ಗಳಂತೆ ಬಾಡಿಗೆಗೆ ಇದ್ದರು. ಪೋಲೀಸರು ವಿಚಾರಣೆ ಮಾಡಿರುತ್ತಾರೆ. ಮೇಲ್ಕಂಡ ವಿಷಯ ಬಿಟ್ಟು, ಬೇರೆ ವಿಷಯವನ್ನು ನಾನು ಪೋಲೀಸರಿಗೆ ಹೇಳಿರುವುದಿಲ್ಲ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

## ಪಾಟಿ ಸವಾಲುಃ ಪಿಪಿಯವರಿಂದಃ

3. ನಾನು ಆರೋಪಿಗೆ ಬಾಡಿಗೆ ಕೊಟ್ಟ ಮನೆಯು ನಾನು ವಾಸಿಸುವ ಮನೆಯ ಮಹಡಿ ಮೇಲೆ ಇತ್ತು ಎಂದರೆ ಸರಿ. ಪೋಲಿಸೇರು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿದ್ದಾರೆ ಎಂದರೆ ಸರಿ. ಪ್ರಾಸಾ-1 ರವರು ದಿಃ 06.09.2020 ರಂದು ನನ್ನ ಸಮಕ್ಷಮ ಘಟನಾ ಸ್ಥಳವನ್ನು ತೋರಿಸಿ, ಆರೋಪಿಯು ಇದೇ ಸ್ಥಳದಲ್ಲಿ ಅತ್ಯಾಚಾರ ಮಾಡಿದ್ದಾನೆ ಎಂದು ಹೇಳಿರುತ್ತಾರೆ ಎಂದರೆ ಸರಿ.

ಸಾಕ್ಷಿಯು ಘಟನೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪೋಲೀಸರು ಪ್ರಾಸಾ-1 ರವರನ್ನು ಕರೆದುಕೊಂಡು ಬಂದಾಗ, ನಾನು ಆಕೆಯ ನೋಡಿದ್ದೇನೆ ಎಂದರೆ ಸರಿ. ಈ ಮೊದಲು ಆರೋಪಿಯು ಪ್ರಾಸಾ-1 ರವರನ್ನು ಆತ ಬಾಡಿಗೆ ಇರುವ ಮನೆಗೆ ಕರೆದುಕೊಂಡು ಬಂದಾಗ, ನಾನು ಆಕೆಯನ್ನು ನೋಡಿದ್ದೇನೆ ಎಂದು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಎಸ್.ಬಿ. ಘಟ್ಟಿರೆಡ್ಡಿಹಾಳ, ಆರೋಪಿ ಪರ ವಕೀಲರಿಂದಃ**

4. ಪೋಲೀಸರಿಗೆ ನಮ್ಮ ಮನೆಯ ಉತಾರವನ್ನು ನೀಡಿಲ್ಲ ಎಂದರೆ ಸರಿ. ಪೋಲೀಸರಿಗೆ ಬಾಡಿಗೆ ಕರಾರನ್ನು ನಾನು ನೀಡಿರುವುದಿಲ್ಲ. ಆರೋಪಿಯು ನಮ್ಮ ಮನೆಯಲ್ಲಿ ತಿಂಗಳಿಗೆ ರೂ.900/- ಗಳಂತೆ ಬಾಡಿಗೆಗೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1 ರವರನ್ನು ಪೋಲೀಸರು ಆರೋಪಿ ಬಾಡಿಗೆಗೆ ವಾಸವಿದ್ದ ಮನೆಗೆ ಕರೆದುಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ.

5. ಪ್ರಾಸಾ-1 ರವರು ದಿಃ 06.09.2020 ರಂದು ನನ್ನ ಸಮಕ್ಷಮ ಘಟನಾ ಸ್ಥಳವನ್ನು ತೋರಿಸಿ, ಆರೋಪಿಯು ಇದೇ ಸ್ಥಳದಲ್ಲಿ ಅತ್ಯಾಚಾರ ಮಾಡಿದ್ದಾನೆ ಎಂದು ಹೇಳಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರ ಗುನ್ನಾ ಸ್ಥಳದ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರ ದಾಖಲೆಯಲ್ಲಿ ನನ್ನ ಸಹಿ ಇರುವುದಿಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**